ನಿನ್ನದೇನಿದ್ದರೂ ಆ ಮರಗಳು ನಿನ್ನ ಜಮೀನಿನಲ್ಲಿ ಹುಟ್ಟಿವೆ ಎಂಬ ಅಧಿಕಾರ ಅಷ್ಟೇ. ವಾಸ್ತವವಾಗಿ ಅದು ನಿನ್ನಪ್ಪಂದೂ ಅಲ್ಲ, ನನ್ನಪ್ಪಂದೂ ಅಲ್ಲ, ನಾನು ನಿನ್ನದೆನ್ನುವ ಮರಗಳನ್ನು ಕಡಿದುಕೊಂಡು ಹೋದದ್ದು ನಿಜವಾದರೂ ಅವು ನಿನ್ನ ಜಮೀನಿನದ್ದು ಎಂದು ಎಂದು ಒಂದಿಷ್ಟು ಹಣ ಕೊಡಲು ಬಂದರೆ ಅದು ಸಾಲದು ಎಂದು ಕೇಳುವ ಹಕ್ಕು ನಿನಗಿಲ್ಲ' ಎಂದಿದ್ದ. ಆಗ ಆ ಹೆಣ್ಮಗಳಲ್ಲಿ ಆ ಸಾಹುಕಾರನನ್ನು ಪ್ರತಿಭಟಿಸುವ ಶಕ್ತಿ ಇರಲಿಲ್ಲವಲ್ಲ ಎಂದು ನನಗೆ ನೋವಾಗಿತ್ತು. ಆದರೆ ಆ ಹೆಣ್ಮಗಳು ಎಂಥ ಗಟ್ಟಿಗಿತ್ತಿ ಗೊತ್ತಾ? 'ಥೂ! ನಿನ್ನ ಜುಜುಬಿ ಹಣಕ್ಕೆ ಇಷ್ಟು ಬೆಂಕಿ ಹಾಕು. ನಾನು ಆ ಮರಗಳಿಗೆ ಮೂತ್ರ ಹೊಯ್ದು ಅವುಗಳನ್ನು ಸಾಕದಿರಬಹುದು. ಆದರೆ ಅವು ನನ್ನಿಂದ ಯಾವ ಪ್ರತಿಫಲವೂ ಇಲ್ಲದೆ ನನ್ನನ್ನು ಪ್ರೀತಿಸುತ್ತಿದ್ದವು. ಆದರೆ ನಾನು ಪಾಪಿ. ಹಣದ ಅಗತ್ಯ ಇದೆ ಎಂದು ಅವುಗಳನ್ನು ನಿನಗೆ ಮಾರಿದೆ' ಎಂದು ಮುಂದೆ ಮಾತೇ ಆಡದೆ ಬೆನ್ನುಹಾಕಿ ಹೊರಟು ಹೋಗಿದ್ದಳು. ಅದನ್ನು ನೋಡಿದ್ದ ನನಗೆ ನಾವು ಸಂದರ್ಭ ಸಿಕ್ಕಾಗ ಯಾವುದಾದರೂ ಒಂದು ಮರಕ್ಕೆ ಯಾಕೆ ಮೂತ್ರ ಮಾಡಬಾರದು? ಅನಿಸಿತು. ಆ ದಿನದಿಂದ ಅವಕಾಶ ಇದ್ದಾಗಲೆಲ್ಲ ಹೀಗೆ ಮೂತ್ರ ಮಾಡುವುದೂ ಇದೆ' ಎಂದು ನಕ್ಕ.

ಟೀಚರಮ್ಮ ಗೊಳ್ಳನೆ ನಕ್ಕು 'ಹುಚ್ಚಪ್ಪ' ಎಂದರು.

ಮುಂದಿನ ವರುಷ ಸಿರಿಲ್ ಊರಿಗೆ ಬರುವಾಗ ಹಿಂದೆ ತಂದ ಹಾಗೆ ಮತ್ತೆ ಮಾವಿನಹಣ್ಣುಗಳನ್ನು ತಂದರೂ, ಆ ಹಣ್ಣುಗಳಲ್ಲಿ ಅಂಥ ವಿಶೇಷ ಏನೂ ಇರಲಿಲ್ಲ ಎಂಬಂತಿದ್ದವು. ಇಬ್ಬರೂ ಹಣ್ಣುಗಳನ್ನು ಕತ್ತರಿಸಿ ತಿನ್ನುವಾಗ 'ಬರುವ ವರುಷ ನಮ್ಮ ಗಿಡದಲ್ಲೇ ಹಣ್ಣು ಆಗುತ್ತದೆ ನೋಡು' ಎಂದ ಸಿರಿಲ್ 'ಹೌದು! ಈ ವರುಷ ಮರದಲ್ಲಿ ಹೂ ಹೋಗಿತ್ತು. ಆದರೆ ಮಿಡಿ ಉಳಿಯಲಿಲ್ಲ' ಎಂದರು ಟೀಚರ್.

ಮರುವರ್ಷ ಆ ಗಿಡದಲ್ಲಿ ಎಲೆಗಳು ಕಾಣದ ಹಾಗೆ ಮಿಡಿಗಳು ಸಂಭ್ರಮಿಸಿ ಕುಣಿಯತೊಡಗಿದುವು. ತೇರಿನ ಹಾಗೆ ಬೆಳೆದು ನಿಂತ ಮರವನ್ನು ನೋಡಿ ದಿನಾ ಆ ಗಿಡವನ್ನು ತಬ್ಬಿ ಬರುತ್ತಿದ್ದ ಸಿಸಿಲಾ ಟೀಚರಮ್ಮನನ್ನು ನೋಡಿದ ದಾರಿಹೋಕರು 'ಈ ಟೀಚರಮ್ಮನಿಗೆ ಅರುಳುಮರುಳು' ಎಂದು ಆಕೆಯ ಹಿಂದಿನಿಂದ ಆಗಲೇ ಆಡತೊಡಗಿದ್ದರು. ಆದರೆ ಅಂಥವರೂ ಈಗ ಆ ಗಿಡದಲ್ಲಿ ಕೆಂಪುಕೆಂಪಾದ ಕಾಯಿಗಳು ಗೋಚರಿಸುತ್ತಿದ್ದ ಹಾಗೆ 'ಎಂಥ ಮಾವಿನ ಹಣ್ಣು ಮಾರಾಯರೇ ಇದು! ಕೇಳಿದರೆ ನಮಗೂ ಒಂದು ಹಣ್ಣು ಕೊಟ್ಟಾರೋ ಏನೋ?' ಎಂದುಕೊಂಡರು. ಅಂಥವರಲ್ಲಿ ಯಾರೋ ಒಬ್ಬರು ಟೀಚರಮ್ಮನನ್ನು ಕರೆದು ಕೇಳಿದಾಗ ಟೀಚರಮ್ಮ 'ಅದು ಇನ್ನೂ ಬೆಳೆದಿಲ್ಲ ಇವರೇ, ಬೆಳೆದಾಗ ನಾನೇ ನಿಮಗೆ ಕೈ ಎತ್ತಿಕೊಡುತ್ತೇನೆ, ಖಂಡಿತ ಬನ್ನಿ' ಎಂದರು.

ಏಪ್ರಿಲ್ ತಿಂಗಳು(ವಸಂತಮಾಸ) ಕಾಲು ಇಡುತ್ತಿದ್ದ ಹಾಗೆ ಆ ಮರದಲ್ಲಿದ್ದ ಎಲ್ಲಾ ಕಾಯಿಗಳೂ ಬಲಿತು ಹಣ್ಣಾಗತೊಡಗಿದವು. ನೋಡುವವರಲ್ಲಿ ಕಣ್ತುಂಬ ಹಣ್ಣುಗಳೇ ತುಂಬಿ ಅವರೂ ತಾವು ಮರವೇ ಎಂಬಂತಾಗಿ ಸಂಭ್ರಮಿಸಿದಾಗ ಆ ಹಣ್ಣುಗಳನ್ನು ಕೇಳದವರಿಗೆಲ್ಲ ಟೀಚರಮ್ಮ 'ಇರಲಿ' ಎಂದು ಒಂದೋ ಎರಡೋ ಹಣ್ಣು ಹಂಚತೊಡಗಿದರು. ಇವುಗಳನ್ನು ನೀವು 'ಮಾರಾಟಮಾಡಬಹುದಲ್ಲ ಟೀಚರಮ್ಮ?' ಎಂದು ಒಬ್ಬಿಬ್ಬರು ಆಕೆಗೆ ಸಲಹೆ ನೀಡುವಷ್ಟರಲ್ಲಿ ಅದು ಸುದ್ದಿಯಾಯಿತು. ಸೀತಾಪುರ ಪೇಟೆಯ ಹಣ್ಣಿನ ವ್ಯಾಪಾರಿಗಳು ಟೀಚರಮ್ಮ ಇದ್ದಲ್ಲಿಗೆ ದೌಡಾಯಿಸಿ ಬಂದು 'ಇಡೀ ಮರವನ್ನೇ ನಮಗೆ ಕಂಟ್ರಾಕ್ಟ್ ಕೊಡಿ ಟೀಚರಮ್ಮ. ನಿಮಗೆ ನಾವು ಕೈತುಂಬಾ ದೊಡ್ಡು ಕೊಡುತ್ತೇವೆ' ಎಂದರು. ಆಗ ಟೀಚರಮ್ಮ